ಆ) 2012–13ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಬೇಡಿಕೆ ಇರುವ ಪರಿವರ್ತಕಗಳಿಗೆ ಸಂಬಂಧಿಸಿದಂತೆ ಜನವರಿ–2013ರ ಅಂತ್ಯದವರೆಗೆ ಒದಗಿಸಲಾದ ವಿದ್ಯುತ್ ಪರಿವರ್ತಕಗಳ ವಿವರಗಳು ಕೆಳಕಂಡಂತಿವೆ:

ಕ್ರಮ ಸಂಖ್ಯೆ	ವಿದ್ಯುತ್ ಪರಿವರ್ತಕಗಳ ಸಾಮರ್ಥ್ಯ	ಸಂಖ್ಯೆ
1	25 ಕೆ.ವಿ.ಎ	71
2	63 ಕೆ.ವಿ.ಎ	66
3	100 ಕೆ.ವಿ.ಎ	6

ಇ) ಬಾಕಿ ಉಳಿದ 25 ಕೆ.ವಿ.ಎ. ಸಾಮರ್ಥ್ಯದ 17 ಸಂಖ್ಯೆಗಳ ವಿದ್ಯುತ್ ಪರಿವರ್ತಕಗಳನ್ನು ಮಾರ್ಚ್–2013ರ ಅಂತ್ಯದೊಳಗೆ ಒದಗಿಸಲಾಗುವುದು.

ಸಮರ್ಪಕ ವಿದ್ಯುತ್

41 : (206)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್

ಅ) ಮುದ್ದೇಬಿಹಾಳ ವಿಧಾನ ಸಭಾ ಕ್ಷೇತ್ರ ಸೇರಿದಂತೆ ಜಿಲ್ಲೆಯಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗದೆ ಸಾರ್ವಜನಿಕರಿಗೆ ಅದರಲ್ಲೂ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು:

ಇ) ರೈತರ ಬೆಳೆಗಳಿಗೆ ದಿನಕ್ಕೆ ಕನಿಷ್ಟ ಪಕ್ಷ ಎರಡು ಗಂಟೆಯಾದರೂ ಪೂರ್ಣ ಪ್ರಮಾಣದ ನಿರಂತರ ವಿದ್ಯುತ್ ಪೂರೈಕೆ ಮಾಡಲು ಸರ್ಕಾರ ಗಮನಹರಿಸುವುದೇ;

ಈ) ಮುದ್ದೇಬಿಹಾಳ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ Transformer ಮೇಲಿಂದ ಮೇಲೆ ಸುಟ್ಟು ಹೋಗುವುದು ಅವುಗಳನ್ನು ಬದಲಾಯಿಸಲು ಹಲವಾರು ದಿನ ಹಿಡಿಯುತ್ತಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು)

ಅ) ಮುದ್ದೇಬಿಹಾಳ ವಿಧಾನ ಸಭಾ ಕ್ಷೇತ್ರವೂ ಸೇರಿದಂತೆ ರಾಜ್ಯಾದ್ಯಂತ ಸರಿಯಾಗಿ ಮಳೆಯಾಗದ ಕಾರಣ, ರಾಜ್ಯವು ತೀವ್ರ ವಿದ್ಯುತ್ ಕೊರತೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಮುಂಬರುವ ಮಳೆಗಾಲದವರೆವಿಗೂ ರಾಜ್ಯದಲ್ಲಿರುವ ಜಲ ವಿದ್ಯುತ್ ಜಲಾಶಯಗಳಲ್ಲಿ ಲಭ್ಯವಿರುವ ನೀರನ್ನು ಮಿತವಾಗಿ ಬಳಸಿಕೊಳ್ಳಲು ಯೋಜಿಸಲಾಗಿದೆ.

ವಿದ್ಯುತ್ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಲು ಖಾಸಗಿ ವಿದ್ಯುತ್ ಉತ್ಪಾದಕರಿಂದ 15ನೇ ಜೂನ್ 2013ರವರೆಗೆ ವಿದ್ಯುತ್ತನ್ನು ಖರೀದಿ ಮಾಡಲು ಒಪ್ಪಂದವನ್ನು ಮಾಡಿಕೊಳ್ಳಲಾಗಿದ್ದು, ಜೂನ್ 2013 ರವರೆಗೆ ಪ್ರತಿ ದಿನ ಸರಾಸರಿ 29.38 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಖರೀದಿಸಲಾಗುವುದು.

ಇ) ರೈತರ ನೀರಾವರಿ ಪಂಪಸೆಟ್ಟುಗಳಿಗೆ ದಿನಕ್ಕೆ 6 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆ. ಕೆಲವೊಂದು ವೇಳೆ ತಾಂತ್ರಿಕ ದೋಷಗಳಿಂದ ವಿದ್ಯುತ್ ಸರಬರಾಜಿನಲ್ಲಿ ಏರುಪೇರುಂಟಾಗುವ ಸಂಭವವಿರುತ್ತದೆ.

ಈ ಮತ್ತು ಉ) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದ ಅನ್ವಯ ಪಟ್ಟಣ ಪ್ರದೇಶಗಳಲ್ಲಿ 24 ಗಂಟೆಯೊಳಗಾಗಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 3 ದಿನಗಳೊಳಗಾಗಿ ಪರಿವರ್ತಕಗಳ ಲಭ್ಯತೆಯನ್ನು ಆಧರಿಸಿ ವಿಫಲಗೊಂಡ ವಿದ್ಯುತ್ ಪರಿವರ್ತಕಗಳನ್ನು ಬದಲಾಯಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅಲ್ಲದೇ, ವಿದ್ಯುತ್ ಪರಿವರ್ತಕಗಳು ವಿಫಲವಾಗದಂತೆ ಮುನ್ನೆಚ್ಚರಿಕೆ ಕ್ರಮವನ್ನು ವಹಿಸಲಾಗುತ್ತಿದೆ.